# 10 ನೇ ತರಗತಿ ನೈದಾನಿಕ ಪರೀಕ್ಷೆ – 2016

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**I. ಶಿಕ್ಷಕರು ಹೇಳುವ ಪದಗಳು , ವಾಕ್ಯಗಳನ್ನು ಬರೆಯಿರಿ. (ಉಕ್ತಲೇಖನ)**

**(ಶಿಕ್ಷಕರು ಹೇಳುವ ಮೂರು ಪದಗಳು,ಮೂರು ವಾಕ್ಯಗಳಲ್ಲಿ ಎರಡೆರಡು ಸರಿ ಬರೆದರೆ " ಎ " ಶ್ರೇಣಿ ನೀಡುವುದು)**

**II. ಕೆಳಗಿನ ಗದ್ಯಭಾಗವನ್ನು ಓದಿ,ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ನನ್ನ ಓದಿನ ಆತ್ಮೀಯ ಸ್ಥಳವೆಂದರೆ " ಪದ್ಮಾವತಿ ಗುಡ್ಡ " ಪದ್ಮಾವತಿಯ ದೇವಸ್ಥಾನ ಜೈನರಿಗೆ ಸಂಬಂಧಿಸಿದ್ದು, ಪ್ರಶಾಂತವಾದ ಸ್ಥಳ. ದೊಡ್ಡ ದೊಡ್ಡ ಕಲ್ಲು ಬಂಡೆಗಳಿಂದ ತುಂಬಿದೆ. ಇಲ್ಲಿಯ "ಅಳುಬುರುಕ ಕಲ್ಲು" ಹೆಸರುವಾಸಿ. ಈ ಸ್ಥಳಕ್ಕೆ ಜನ ಬರಲು ಹೆದರುತ್ತಿದ್ದರು. ಮೊದಮೊದಲು ನಮ್ಮ ಕೇರಿಯ ಒಬ್ಬನೇ ಒಬ್ಬ ವ್ಯಕ್ತಿ ಇಲ್ಲಿಗೆ ಓದಲು ಬರುತ್ತಿದ್ದ,ಜತೆಗೋಸ್ಕರ ಕೆಲವೊಮ್ಮೆ ನನ್ನನ್ನು ಕರೆದು ತರುತ್ತಿದ್ದ. ಆತನ ಹೆಸರು ಇಟ್ಟಪ್ಪ. ಈತ ಈಗ ಬ್ಯಾಂಕ್ ನೌಕರ. ಈತನ ಓದುವ ಹವ್ಯಾಸವೇ ನನ್ನನ್ನು ಓದುವಂತೆ ಪ್ರೇರೇಪಿಸಿತು. ಈತನ ಓದು ಮುಗಿದ ಅನಂತರ ನಾನೊಬ್ಬನೆ ಎಷ್ಟೋ ಬಾರಿ ಅಲ್ಲಿಗೆ ಓದಲು ಹೋಗುತ್ತಿದ್ದೆ. ಈಗಂತು ಆದು ಓದುಗರ ಪವಿತ್ರ ಸ್ಥಳವಾಗಿದೆ. ಎಲ್ಲೆಂದರಲ್ಲಿ ಆ ಗುಡ್ಡದ ತುಂಬೆಲ್ಲ ಓದುಗರಿರುವುದು ನೋಡಿ ನನಗಂತೂ ಎಲ್ಲಿಲ್ಲದ ಹೆಮ್ಮೆಯಾಗುತ್ತಿದೆ.

**ಪ್ರಶ್ನೆಗಳು : (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

1.ಲೇಖಕರ ಹೆಮ್ಮೆಯ ವಿಷಯ ಯಾವುದು ?

2. ಲೇಖಕರ ಓದಿಗೆ ಪ್ರೇರಕಾಂಶ ಯಾವುದು ?

3. ಜೈನರಿಗೆ ಸಂಬಂಧಿಸಿದ ದೇವಸ್ಥಾನ ಯಾವುದು ?

**III. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಗುರುವಿಂದು ಬೆಸಸೆ ಭಿಕ್ಷೆಗೆ  
ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ ।  
ಪುರುಳಿಲ್ಲ ನಿನ್ನ ಕೇಡಂ  
ಪರಿವೀಕ್ಷಿಸಿ ಕರುಣದಿಂದೆ ತಲ್ಲಣಿಸಿದಪೆಂ ॥

ಪ್ರಜೆಯಲ್ಲಂ ಜಲಗಂಧ  
ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ ।  
ವ್ರಜದಿಂ ಪೂಜಿಸುವುದು ಜೀ  
ವ ಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ ॥

**ಪ್ರಶ್ನೆಗಳು (ಕನಿಷ್ಠ ಎರಡು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

| |
|---|
| 1) ಅಭಯ ರುಚಿ – ಅಭಯಮತಿಯರನ್ನು ಯಾವಾಗ ಹಿಡಿದು ತರಲಾಯಿತು ? |
| |
| 2) ಮಾರಿ ದೇವತೆ ಹೇಳಿದ ಪೂಜಾ ಸಾಮಾನುಗಳಾವುವು ? |
| |
| 3) ಮಾರಿ ದೇವತೆಯ ಮುನಿಸಿಗೆ ಕಾರಣವಾಗಬಹುದಾದ ವಿಷಯ ಯಾವುದು ? |
| |

**IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (ಕನಿಷ್ಠ ಆರು ಪ್ರಶ್ನೆಗಳಿಗೆ ಸರಿ ಉತ್ತರಿಸಿದ್ದರೆ "ಎ" ಶ್ರೇಣಿ ನೀಡುವುದು)**

1) ಕನ್ನಡ ವರ್ಣಮಾಲೆಯ ಅನುನಾಸಿಕಗಳನ್ನು ಬರೆಯಿರಿ.

2) ದೇವಾಲಯ – ಈ ಪದವನ್ನು ಬಿಡಿಸಿ ಬರೆಯಿರಿ.

3) ಅರಮನೆ – ಈ ಪದವನ್ನು ವಿಗ್ರಹಿಸಿ ಬರೆಯಿರಿ.

4) ಓದುವನು – ಈ ಪದದ ಬಹುವಚನ ರೂಪ ಬರೆಯಿರಿ.

5) ಸರಸರ, ಮನೆಮಠ– ಇವುಗಳಲ್ಲಿ ಅನುಕರಣಾವ್ಯಯ ಪದ ಯಾವುದು ?

6) ಕುಂಟ, ರಾಮ – ಇವುಗಳಲ್ಲಿ ಅನ್ವರ್ಥನಾಮ ಪದ ಬರೆಯಿರಿ.

7) ಭೀಮ–ದುರ್ಯೋಧನರು ಮದಗಜಗಳಂತೆ ಹೋರಾಡಿದರು – ಇದರಲ್ಲಿನ ಅಲಂಕಾರ ಹೆಸರಿಸಿ.

8) ವೀರಶೈವ : ವೀರಗಾಸೆ :: ಬೀರೇಶ್ವರ : ____________

9) ಗುರು ವಶಿಷ್ಠಂಗೆರಗಿ ನೇಮವ ಪಡೆದಖಿಳ – ಈ ವಾಕ್ಯಕ್ಕೆ ಪ್ರಸ್ತಾರ ಹಾಕಿರಿ.

10) ಕಂದ್ಯ ಪದ್ಯದಲ್ಲಿ ಎಷ್ಟು ಸಾಲುಗಳಿರುತ್ತವೆ ?

*****